ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ.906/2019

ಸಿ.ಡಬ್ಲ್ಯೂ-1, ಪಿ.ಡಬ್ಲ್ಯೂ-1

ದಿಃ 09-12-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಗೌರಮ್ಮ |
| ತಂದೆ/ಗಂಡನ ಹೆಸರು | ಶಿವರಾಜು |
| ವಯಸ್ಸು | 35 ವರ್ಷ |
| ಕೆಲಸ | ಕೂಲಿ |
| ವಾಸಸ್ಥಳ | ಮಾರನಹಳ್ಳಿ ಗ್ರಾಮ, ಹುಣಸೂರು ತಾಲ್ಲೂಕು |

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:**

ಆರೋಪಿತರರ ಪರಿಚಯ ಇದೆ. ಅವರು ನಮ್ಮ ಪಕ್ಕದ ಮನೆಯವರು. ಸುಮಾರು 5 ವರ್ಷಗಳ ಹಿಂದೆ 1 ನೇ ಆರೋಪಿಯು ಬೆಳಿಗ್ಗೆ 9-00 ಗಂಟೆ ಸಮಯದಲ್ಲಿ ನಮ್ಮ ಮನೆ ಬಳಿ ಬಂದು ತುರುಬೇವು ಗಿಡವನ್ನು ಕಡಿಯುತ್ತಿದ್ದರು. ನಾನು ಮನೆಯೊಳಗಿನಿಂದ ಬಂದು ಯಾಕೆ ಕಡಿಯುತ್ತಿದ್ದೀಯಾ ಎಂದು 1 ನೇ ಆರೋಪಿಯನ್ನು ನಾನು ಕೇಳಿದೇನು. ಆಗ 1 ನೇ ಆರೋಪಿಯು ಬಡ್ಡಿ ಸೂಳೆ ಎಂದು ಬೈದಿರುತ್ತಾನೆ. ಕಾಚಿ ಕಡ್ಡಿಯನ್ನು ತೆಗೆದುಕೊಂಡು ನನ್ನ ತೊಡೆಗೆ, ಕೈಗೆ ಹಾಗೂ ರಟ್ಟೆಗೆ ಹೊಡೆದಿರುತ್ತಾನೆ. 2 ನೇ ಆರೋಪಿಯು ಕಾಚಿ ದೊಣ್ಣೆಯಿಂದ ನನ್ನ ಬೆನ್ನಿಗೆ ಹೊಡೆದಿರುತ್ತಾನೆ. ಮಲ್ಲೇಶ ಎನ್ನುವವರು ನನ್ನ ಗುದ್ದಿ ತಳ್ಳಿ ಹೊಡೆದಿರುತ್ತಾನೆ. 2 ನೇ ಆರೋಪಿಯ ಮಗಳು ತಾಯಮ್ಮ, ಶಿವಮ್ಮ ಮತ್ತು ರಾಜಮ್ಮ ರವರು ಕೈಯಿಂದ ನನ್ನ ಮೈಕೈಗೆ ಹೊಡೆದಿರುತ್ತಾರೆ. ಆಗ ಸುರೇಶ ಮತ್ತು ಸುಶೀಲ ಎಂಬುವವರು ಜಗಳ ಬಿಡಿಸಿರುತ್ತಾರೆ. ನನ್ನ ಮಗ ಆಂಬ್ಯುಲೆನ್ಸ್‌ಗೆ ಕರೆ ಮಾಡಿ ಹುಣಸೂರು ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ. ದಾಖಲಾದ ಮರುದಿನ ಬಿ.ಕೆ. ಪೊಲೀಸರು ಆಸ್ಪತ್ರೆಗೆ ಬಂದು ನನ್ನ ಹೇಳಿಕೆ ಪಡೆದಿರುತ್ತಾರೆ. ಇವರು ಹೊಡೆದಿದ್ದನ್ನು ಪೊಲೀಸರಿಗೆ ಹೇಳಿ, ಬರೆಯಿಸಿ, ಸಹಿ ಮಾಡಿರುತ್ತೇನೆ. ಪೊಲೀಸರು ಬರೆದಿದ್ದು ದೂರು ಆಗಿದ್ದು, ಸಾಕ್ಷಿಯು ದೂರಿನ

ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ಮೇಲೆ ಹಲ್ಲೆ ಮಾಡಿದ ಕಾಚಿ ದೊಣ್ಣೆಯನ್ನು ನೊಡಿ ಗುರುತಿಸಿದ್ದು, ಸದರಿ ದೊಣ್ಣೆಯನ್ನು ಮು.ಮಾ-1 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾದ ಮುಂದಿರುವ 1 ರಿಂದ 4 ನೇ ಆರೋಪಿತರರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿ ಪರಃ**

ಆರೋಪಿತರ ಪರ ವಕೀಲರು ಹಾಜರಿದ್ದು, ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.